## 67

# “ಮತ್ತು ಅವರು ಕಲ್ಪಿಸಿಕೊಂಡರು”

# (21:26-40)

ಪಂಚಾಶತ್ತಮ ದಿನವು ಅಂತ್ಯಗೊಂಡಿತ್ತು. ಪ್ರಪಂಚದಾದ್ಯಂತ ಬಂದಿದ್ದ ಜನರೆಲ್ಲರೂ ಇನ್ನೂ ಯೆರೂಸಲೇಮಿನಲ್ಲೇ ಓಡಾಡುತ್ತಿದ್ದರು.[1] ಕೆಲವರು ತಮ್ಮ ಪ್ರಯಾಣಕ್ಕಾಗಿ ಆಹಾರ ಸಾಮಾಗ್ರಿಗಳನ್ನು ಕೊಂಡುಕೊಳ್ಳುತ್ತಿದ್ದರು. ಮತ್ತೆ ಕೆಲವರು ತಮ್ಮ ಸ್ನೇಹಿತರನ್ನು ಸಂಧಿಸುತ್ತಿದ್ದರು. ಇಲ್ಲವಾದಲ್ಲಿ ಮುಂದಿನ ವರ್ಷದವರೆಗೆ ಕಾಯಬೇಕಿತ್ತು. “ಅದು ದೇವರ ಪಟ್ಟಣವಾದ್ದರಿಂದ” ಕೆಲವರು ಇನ್ನು ಅಲ್ಲಿಯೇ ತಂಗಿದ್ದು. ಪಟ್ಟಣದ ಉತ್ತರ ಪ್ರಾಂತದಲ್ಲಿ, ದೊಡ್ಡ ದೇವಾಲಯವಿದದ್ದರಿಂದ, ಇನ್ನು ಕೆಲವರು ಅಪಾಯಕಾರಿಯಾದ ತಂತ್ರದಿಂದ ಅಲ್ಲಿ ಕೂಡಿ ಬಂದಿದ್ದರು: ಅವರ ಕೆಟ್ಟ ಕಣ್ಣುಗಳ ದೃಷ್ಟಿಯು ಪೌಲನ ಚಲನ ವಲನದಲ್ಲಿ ಕೇಂದ್ರೀ ಕೃತವಾಗಿತ್ತು, ಅವನಿಗೆ ತೊಂದರೆ ನೀಡುವದಕ್ಕೆ ಕಾರಣವನ್ನು ಹುಡುಕುತ್ತಿದ್ದರು. ಈಗ ಪೌಲನು ತನ್ನ ಜೀವಿತದ ಅತಿ ಅಪಾಯಕಾರಿಯಾದ ಸಂದರ್ಭದಲ್ಲಿದ್ದನು.

ನಮ್ಮ ಪಾಠದ ಮುಖ್ಯಾಂಶವನ್ನು ಅಪೊಸ್ತಲರ ಕೃತ್ಯಗಳು 21:29ರಲ್ಲಿ ಗಮನಿಸುತ್ತೇವೆ: “ಮುಂಚೆ ಅವರು ಎಫೆಸದ ತ್ರೊಫಿಮನನ್ನು *ಅವನ ಸಂಗಡ ಪಟ್ಟಣದಲ್ಲಿ* ಕಂಡಿದ್ದರಿಂದ ಅವನನ್ನು ಪೌಲನು ದೇವಾಲಯದೊಳಗೆ ಕರೆದುಕೊಂಡು ಬಂದನೆಂದು ಭಾವಿಸಿದರು” (ಒತ್ತಿ ಹೇಳಿದ್ದು ನನ್ನದು). ಅವರು ಪೌಲನನ್ನು ಒಬ್ಬ ಅನ್ಯನೊಂದಿಗೆ ಪಟ್ಟಣದಲ್ಲಿ ಕಂಡ ನಂತರ, ಪೌಲನು ಇತರರೊಂದಿಗೆ ದೇವಾಲಯದಲ್ಲಿ ಕಂಡರು, “ಆಗ ಅವರು” ಪೌಲನು ಅನ್ಯರನ್ನು ದೇವಾಲಯದೊಳಗೆ ಕರೆತಂದನೆಂದು ತಿಳಿದರು! ಅಮೇರಿಕೆಯಲ್ಲಿ ಹೇಳುವಂತೆ, ಅವರು ತಮ್ಮದೇ ಆದ ನಿರ್ಣಯಕ್ಕೆ ಬಂದರು. ಅನೇಕ ಭಾವನೆಗಳು ಅವಮಾನವನ್ನು ತಂದರೆ, ಅಪೊಸ್ತಲರ ಕೃತ್ಯಗಳು 21ರ ಆ ಊಹೆಗಳು ಪೌಲನ ಜೀವಮಾನಕಾಲವನ್ನೇ ಆಕ್ರಮಿಸಿದವು. ಆ ಹಿಂದಿನ ಊಹೆಗಳನ್ನು ಗಮನಿಸುವಾಗ - ಈ ದಿನಗಳಲ್ಲೂ ಇರುವ ಮರಣಕರವಾದ ಊಹೆಗಳನ್ನು ಗಮನಿಸೋಣ.

## ಆ ದಿನಗಳಲ್ಲಿದ್ದ ಅಪಾಯಕಾರಿಯಾದ ಕಲ್ಪನೆಗಳು (21:26-40)

ವ್ರತವನ್ನು ಕೈಗೊಂಡ ಆ ನಾಲ್ವರ - ವೆಚ್ಚವನ್ನು ಪೌಲನೇ ಭರಿಸಬೇಕೆಂಬ ಸವಾಲನ್ನು ಯೆರೂಸಲೇಮಿನ ಹಿರಿಯರು ನೀಡಿದ್ದರು. ಆ ನಾಲ್ವರು ನಾಜೀರರು ತಮ್ಮನ್ನು ಅಶುದ್ಧ ಮಾಡಿಕೊಂಡು, ವೆಚ್ಚ ಭರಿತವಾದ ಏಳುದಿನಗಳ ಶುದ್ಧತೆಯನ್ನು ಮಾಡಬೇಕಾಯಿತು. ಆ ಕಾರಣದಲ್ಲಿ ನಿರ್ದಿಷ್ಟತೆ ಇಲ್ಲದಿದ್ದರೂ, “ಆಗ ಪೌಲನು ಆ ಮನುಷ್ಯರನ್ನು ಕರೆದುಕೊಂಡು ಮರುದಿನ ಅವರೊಡನೆ ತನ್ನನ್ನು ಶುದ್ಧಿ ಮಾಡಿಕೊಂಡು ವ್ರತದ ದಿವಸಗಳು ಮುಗಿದವೆಂದು ತಿಳಿಸುವವನಾಗಿ ದೇವಾಲಯದೊಳಗೆ ಹೋದನು. ಪ್ರತಿಯೊಬ್ಬನಿಗೋಸ್ಕರ ಮಾಡಬೇಕಾದ ಅರ್ಪಣೆಯನ್ನು ಮುಂದೆ ಅರ್ಪಿಸಬೇಕಾಗಿತ್ತು” (ವಚನ 26). ಪೌಲನು ಶುದ್ಧಿಕರಣದ ಯಜ್ಞಗಳ ಏರ್ಪಾಟು ಮಾಡಲು ದಿನೇ ದಿನೇ ದೇವಾಲಯಕ್ಕೆ ಹೋಗುತ್ತಿದ್ದನು.

### ಮರಣಕರವಾದ ಕಲ್ಪನೆಗಳು

“ಆ ಏಳು ದಿವಸಗಳು ತುಂಬುತ್ತಿರುವಾಗ” (ವಚನ 27ಎ), ಆಸ್ಯ ಸೀಮೆಯಿಂದ ಬಂದಿದ್ದ ಯೆಹೂದ್ಯರು ಅವನನ್ನು ದೇವಾಲಯದಲ್ಲಿ ಕಂಡರು. ಪ್ರಾಯಶಃ ಇವರು

ಎಫೆಸದವರಾಗಿರಬಹುದು, ಅಲ್ಲಿ ಪೌಲನು ಸುಮಾರು ಮೂರು ವರ್ಷಗಳ ಕಾಲ ಸೇವೆ ಮಾಡಿದ್ದನು, ಆ ಯೆಹೂದ್ಯರು ಅವನ ಪ್ರಸಂಗಕ್ಕೆ ವಿರೋಧ ವ್ಯಕ್ತಪಡಿಸಿದ್ದರು (19:8, 9), ಮತ್ತು ಅವನಿಗೆ ವಿರುದ್ಧವಾಗಿ ಸಂಚು ನಡಿಸಿದ್ದರು (20:18, 19), ಹಾಗೂ ದಂಗೆಯನ್ನು ಎಬ್ಬಿಸಿ, ಪೌಲನನ್ನು ಹೊರ ಹಾಕಿದ್ದರು (19:23-41) - ಈಗ ಅವನನ್ನು ಪೂರ್ಣ ನಿರ್ನಾಮ ಮಾಡುವ ಅವಕಾಶವನ್ನು ಪಡೆದರು.[2]

"ಮುಂಚೆ ಅವರು ತ್ರೊಫಿಮನನ್ನು ಅವನ ಸಂಗಡ ಪಟ್ಟಣದಲ್ಲಿ ಕಂಡಿದ್ದರು" (21:29ಎ). ತ್ರೋಫಿಮನು ಯೆರೂಸಲೇಮಿನಿಂದ ಕಾಣಿಕೆಯನ್ನು ಸಂಗ್ರಹಿಸಿ ಬಂದವರಲ್ಲಿ ಒಬ್ಬನಾಗಿದ್ದನು (20:4). ಅವನು ಎಫೆಸದಿಂದ ಬಂದ ಅನ್ಯನಾದ ಕಾರಣ, ಆಸ್ಯ ಸೀಮೆಯ ಯೆಹೂದ್ಯರು ಅವನ ಮುಖಚರ್ಯೆಯನ್ನು ಕಂಡುಹಿಡಿಯಲು ಸಾಧ್ಯವಾಯಿತು. ಈಗ ಅವರು, "ಪೌಲನು ಅವನನ್ನು ದೇವಾಲಯದೊಳಗೆ ಕರೆದುಕೊಂಡು ಬಂದನೆಂದು ಭಾವಿಸಿದರು" (21:29ಬಿ).

ಇದನ್ನು ನಾವು ಮರಣಕರವಾದ ಭಾವನೆ ಎಂದು ತಿಳಿಯುವದಾದರೆ, ದೇವಾಲಯಕ್ಕೆ[3] ಸಂಬಂಧಪಟ್ಟ ಕೆಲವು ವಿಚಾರಗಳನ್ನು ಸಹ ಅರಿಯಬೇಕಾಗುತ್ತದೆ. ದೇವಾಲಯ, ಎಂಬ ಪದವನ್ನು ಗ್ರೀಕ್‌ನಲ್ಲಿ "ಹೈರಾನ್" ಎಂದು ಕರೆಯುವರು, ದೇವಾಲಯದ ಪರಿಶುದ್ಧ ಭಾಗ ಎಂಬ ಅರ್ಥವಾಗಿದೆ. ಅನ್ಯರ ಅಂಗಳದಲ್ಲಿ ಮಾತ್ರ ಅನ್ಯರು ಪ್ರವೇಶಿಸಬಹುದಿತ್ತು, ಆದರೆ ಅವರು ಅಲ್ಲಿಂದ ಮುಂದಕ್ಕೆ ಹೋಗಬಾರದಿತ್ತು. ಅನ್ಯರ ಅಂಗಳದಿಂದ, ಮಹಾ ಪರಿಶುದ್ಧ ಸ್ಥಳದ ನಡುವಿನ ಹಾದಿಯಲ್ಲಿ: "ಇತರೆ ಜನಾಂಗದ ಯಾರೇ ಆದರೂ (ಇವತ್ತಿಗೂ) ದೇವಾಲಯದ ಸುತ್ತಲಿರುವ ನಿಷೇದಿತ ಸ್ಥಳವನ್ನು ದಾಟಿ ಬರಬಾರದಿತ್ತು; ಈ ಅಪ್ಪಣೆಯನ್ನು ಮೀರಿದವರು ಮರಣ ಪಾತ್ರರು" ಎಂಬ ಎಚ್ಚರಿಕೆಯ ಫಲಕವನ್ನು ಹಾಕಲಾಗಿತ್ತು.[4] ಯಾರಾದರು ಈ ಕಟ್ಟಳೆಯನ್ನು ಮೀರಿದರೆ, ಯೆಹೂದ್ಯರೇ ಅವರಿಗೆ ಮರಣದಂಡನೆಯನ್ನು ನೀಡುವ ಅಧಿಕಾರವನ್ನು ರೋಮಾಯರು ದೇವಾಲಯದ ಅಧಿಕಾರ ನಡಿಸುತ್ತಿದ್ದ ಯೆಹೂದ್ಯರಿಗೆ ನೀಡಿದ್ದರು, ಅದು ರೋಮಾಯ ನಾಗರೀಕರಿಗೂ ನಿಷಿದ್ಧವಾಗಿತ್ತು. ಒಂದು ವೇಳೆ ಪೌಲನು ಒಬ್ಬ ಅನ್ಯನನ್ನು ಆ ಪರಿಶುದ್ಧ ಸ್ಥಳಕ್ಕೆ ಕರಕೊಂಡು ಹೋಗಿದ್ದರೆ, ಅದು ಪ್ರಮುಖವಾದ ಅಪರಾದವಾಗಿತ್ತು!

ಪೌಲನು ಆ ನಿಯಮವನ್ನು ಮೀರಿದನು ಎಂದು ಹೇಳುವದಕ್ಕೆ ಆಸ್ಪದ ಯೆಹೂದ್ಯರಿಗಾಗಲೀ ಅಥವಾ ನಮಗಾಗಲೀ ಹಕ್ಕಿರುವದಿಲ್ಲ. ನಿಮಯಗಳನ್ನು ಪಾಲಿಸುವಲ್ಲಿ ಶ್ರದ್ಧೆವುಳ್ಳವನು ಎಂದಿಗೂ ಆ ನಿಯಮಗಳನ್ನು ಮೀರಲು ಸಾಧ್ಯವಿರುವದಿಲ್ಲ, ಅಂಥವನು ಮೂರ್ಖನಾಗಿದ್ದರೆ ಮಾತ್ರ ಅದನ್ನು ಮೀರಲು ಸಾಧ್ಯವಿದೆ - ಪೌಲನು ಮೂರ್ಖನಾಗಿರಲಿಲ್ಲ.[5] ನೀವು ಯಾರನ್ನಾದರು ದ್ವೇಷಿಸುತ್ತಿದ್ದರೆ, ಅವರು ಮಾಡುವಂಥದೆಲ್ಲಾ ಕೆಟ್ಟದ್ದೇ ಎಂದು ಭಾವಿಸುವಿರಿ.

ಆಸ್ಯ ಸೀಮೆಯಿಂದ ಬಂದಿದ್ದ ಯೆಹೂದ್ಯರು ಅವನನ್ನು ದೇವಾಲಯದಲ್ಲಿ ಕಂಡು, ಎಫೆಸದ ದೇಮೇತ್ರಿಯನ ತಂತ್ರವನ್ನೇ ಬಳಸಿ, "ಜನರೆಲ್ಲರನ್ನು ಗುಂಪುಕೂಡಿಸಿದರು" (ವಚನ 27ಬಿ).[6] "ಅವನನ್ನು ಹಿಡಿದು ಇಸ್ರಾಯೇಲ್ ಜನರೇ, ಸಹಾಯ ಮಾಡಿರಿ" ಎಂದು ಕೂಗಿದರು (ವಚನಗಳು 27ಸಿ, 28ಎ). ಒಂದು ವೇಳೆ ಪೌಲನು ತ್ರೋಫಿಮನನ್ನು ಪರಿಶುದ್ಧ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರೆ, ಅವರು ದೇವಾಲಯದ ಕಾವಲುಗಾರರನ್ನು ಸಹಾಯಕ್ಕಾಗಿ ಕರೆಯಬಹುದಿತ್ತು. ಅವರು ಪೌಲನನ್ನಾಗಲೀ, ಇತರೆ ಅನ್ಯರನ್ನಾಗಲೀ ಹಿಡಿದು, ಅವರಿಗೆ ಮರಣದಂಡನೆಯ ಶಿಕ್ಷೆಯನ್ನು ನೀಡುವ ಅಧಿಕಾರ ಹೊಂದಿದ್ದು. ಅದರ ಬದಲಾಗಿ, ಎಫೆಸದ ಯೆಹೂದ್ಯನು ಸಹಾಯಕ್ಕಾಗಿ ಜನರನ್ನು ಗುಂಪುಕೂಡಿಸಿದರು - ಅವರ ಅಪವಾದದಲ್ಲಿ ಯಾವುದೇ ತಿರುಳು ಇರಲಿಲ್ಲ ಎಂಬ ಸೂಚನೆಯನ್ನು ಈ ಘಟನೆಯಲ್ಲಿ ನೋಡುತ್ತೇವೆ.

ಈ ಘಟನೆ ನಡೆದಾಗ, ಪ್ರಾಯಶಃ ಪೌಲನು ಸ್ತ್ರೀಯರ ಅಂಗಳದಲ್ಲಿರಬಹುದು ನಾಜೀರರು ತಮ್ಮ ವ್ರತವನ್ನು ಅಂತ್ಯಗೊಳಿಸುವದಕ್ಕೆ ಅಂಗಳದ ದಕ್ಷಿಣ ಹಾಗೂ ಪೂರ್ವದ ನಡುವಿನ ಮೂಲೆಯಲ್ಲಿ ಸೇರಿ ಬರುತ್ತಿದ್ದರು. ಆಸ್ಯದ ಯೆಹೂದ್ಯರು ಅಪೊಸ್ತಲನನ್ನು ಹಿಡಿದು, "ನಮ್ಮ

ಜನರಿಗೂ[7] ಧರ್ಮಶಾಸ್ತ್ರಕ್ಕೂ ಈ ಆಲಯಕ್ಕೂ ವಿರುದ್ಧವಾಗಿ ಎಲ್ಲೆಲ್ಲಿಯೂ ಎಲ್ಲರಿಗೂ ಬೋಧನೆ ಹೇಳುವ ಆ ಮನುಷ್ಯನು ಇವನೇ. ಇದಲ್ಲದೆ ಇವನು ಗ್ರೀಕರನ್ನು[8] ದೇವಾಲಯದೊಳಗೆ ಕರೆದುಕೊಂಡು ಬಂದು ಈ ಪರಿಶುದ್ಧ ಸ್ಥಳವನ್ನು ಹೊಲೆ ಮಾಡಿದ್ದಾನೆ ಎಂದು ಕೂಗಿದರು" (ವಚನ 28ಬಿ).[9]

ಯೆಹೂದ್ಯರಿಗೆ ಮೂರು ಪರಿಶುದ್ಧವಾದ ಸಂಗತಿಗಳಿದ್ದವು: ಅವರ ದೇಶ, ಅವರ ಧರ್ಮಶಾಸ್ತ್ರ, ಮತ್ತು ಅವರ ದೇವಾಲಯ ಪೌಲನು ಮೊದಲನೆಯದನ್ನು ಅಗೌರವಿಸಿದನು. ಎರಡನೆಯದನ್ನು ನಾಶಮಾಡಿದನು, ಮೂರನೆಯದನ್ನು ಹೊಲೆ ಮಾಡಿದನು[10] ಎಂಬ ಅಪ ವಾದವನ್ನು ಮಾಡಿದರು, ಈ ವಿಧವಾದ ಅಪವಾದಗಳು ಈ ಹಿಂದೆಯು ಯೆಹೂದ್ಯರಿಗೆ ಸಹಾಯ ಮಾಡಿದ್ದವು; ಅವುಗಳನ್ನು ಯೇಸುವಿಗೆ ವಿರುದ್ಧವಾಗಿ ಉಪಯೋಗಿಸಿದ್ದರು (ಮಾರ್ಕ 14:56-64; ಯೋಹಾನ 2:19). ಮತ್ತು ಸ್ತೆಫನನಿಗೂ ಈ ಅಪವಾದ ಮಾಡಿದ್ದರು (ಅಪೊಸ್ತಲರ ಕೃತ್ಯಗಳು 6:11, 13, 14), ಅಪವಾದ ಹೊಂದಿದ ಈ ಇಬ್ಬರನ್ನೂ, ಮರಣ ಶಿಕ್ಷೆಗೆ ಒಳಪಡಿಸಲಾಯಿತು.

ಈ ವರ್ತಮಾನವು ಕಾಳ್ಗಿಚ್ಚಿನಂತೆ ಬೀದಿಯ ಜನರಲ್ಲಿ ಪ್ರಸರಿಸಿತು: "ಆಗ ಪಟ್ಟಣವೆಲ್ಲಾ ಕಲಕಿ ಹೋಯಿತು, ಜನರು ಎಲ್ಲಾ ಕಡೆಯಿಂದ ಓಡಿ ಬಂದು ಕೂಡಿದರು" (ಅಪೊಸ್ತಲರ ಕೃತ್ಯಗಳು 21:30ಎ). ಹಿಂದಿನ ದಿನವಾದ ಪಂಚಾಶತ್ತಮ ದಿನದಂದು, ಲೋಕದಾದ್ಯಂತ ಜನರು ಯೆರೂಸಲೇಮಿನಲ್ಲಿ ಕೂಡಿ ಅಪೊಸ್ತಲನ ಸಂದೇಶವನ್ನು ಕೇಳಿದ್ದರು. ಈಗ, ಇಪ್ಪತ್ತ - ಏಳು ವರ್ಷಗಳ ನಂತರ, ದೇವಾಲಯದಲ್ಲಿ ಒಬ್ಬ ಅಪೊಸ್ತಲನು ಸಾಯುವ ದೃಷ್ಯವನ್ನು ವೀಕ್ಷಿಸಲು ಜನರು ಸೇರಿ ಬಂದಿದ್ದರು.

"ಮತ್ತು ಪೌಲನನ್ನು ಹಿಡಿದು ದೇವಾಲಯದ ಹೊರಗೆ ಎಳೆದುಕೊಂಡು ಬಂದರು" (ವಚನ 30ಬಿ) - ಇನ್ನೊಂದು ಅರ್ಥದಲ್ಲಿ ಹೇಳುವದಾದರೆ, ದೇವಾಲಯದ ಪರಿಶುದ್ಧ ಅಂಗಳದಿಂದ ಅನ್ಯರ ಅಂಗಳಕ್ಕೆ ಎಳೆದು ತಂದರು.[11] ಆರಾಧನೆಯ ನಡುವೆ, ಒಬ್ಬ ವಿಶ್ವಾಸಿಯನ್ನು ಸಭೆಯಿಂದ ಹೊರಕ್ಕೆ ಎಳೆದು ಹಾಕುವ ದೃಶ್ಯದಂತಿದೆ. ಅವನನ್ನು ಸ್ತ್ರೀಯರ ಅಂಗಳದಿಂದ ಹೊರ ತಂದರು, ಒಂದು ವೇಳೆ ಅವನನ್ನು ಅಲ್ಲೇಕೊಂದುಹಾಕಿದ್ದರೆ, ಅದು ಪರಿಶುದ್ಧ ಸ್ಥಳವಾ ದ್ದರಿಂದ, ಅವನ ರಕ್ತವು ದೇವಾಲಯವನ್ನು ಅಶುದ್ಧಗೊಳಿಸುವ ಸಾಧ್ಯತೆಯಿತು (2 ಅರಸು 11:15, 16; 2 ಪೂರ್ವಕಾಲವೃತ್ತಾಂತ 24:21). ಮುಗ್ಧ ಮನುಷ್ಯನನ್ನು ಹಾಳುವಡುವಲ್ಲಿ ಅವರು ಹಿಂಜರಿಯಲಿಲ್ಲ, ಅವರು ಸ್ವಾಸ್ತ್ಯದ ಒಂದು ತುಣುಕನ್ನಾದರು ಹೊಲೆ ಮಾಡಲು ಮುಂದಾಗಲಿಲ್ಲ.

ಅವರ ಕೃತ್ಯಗಳನ್ನು ವಿವರಿಸಿದ ನಂತರ, ಲೂಕನು ಇನ್ನೊಂದು ಮಾತನ್ನು ಸೇರಿಸಿರುವನು. ಕೂಡಲೇ ಬಾಗಿಲುಗಳನ್ನು ಮುಚ್ಚಿದರು (ವಚನ 30ಸಿ); ವಿವರಣೆ ಗೋಸ್ಕರವಾಗಿ; ದೇವಾಲಯದ ಕಾವಲುಗಾರರು ಸ್ತ್ರೀಯರ ಅಂಗಳದ ಬಾಗಿಲು ಮುಚ್ಚಿದರು ಎಂದು ಹೇಳಿರಬಹುದು, ಅಥವಾ ಆರಾಧನೆಗೆ ಅಡಚಣೆಯಾಗಬಾರದೆಂದು ಈ ಕಾರ್ಯಮಾಡಿರಬಹುದು. ಆದಾಗ್ಯೂ ಈ ಪದದಲ್ಲಿ, ಒಂದು ಸೂಚನೆಯ ಸಂಕೇತವು ಅಡಗಿದೆ ಎಂದು ಕೆಲವು ಪಂಡಿತರು ಹೇಳುವರು.

> ಲೂಕನು ತಿಳಿಸಿರುವಂತ ಎರಡು ವಿಧವಾದ ಅಂಶಗಳಲ್ಲಿ, ಈಗ ಯೆರೂಸಲೇಮಿನ ಮಂದಿರವು, ಪವಿತ್ರ ಕಾರ್ಯಗಳು ನಿಂತುಹೋದವು. ದೇವರ ವಾಕ್ಯದ ಹಾಗೂ ಸಂದೇಶಕರ ಮನೆ ಎನಿಸಿಕೊಂಡ, ಮನೆಯು ಅವರನ್ನೆ ಹೊರಹಾಕಿತು: ಅನೇಕ ವರ್ಷಗಳ ಹಿಂದೆ, ಇದರ ನಾಶನದ ಕುರಿತು ಯೇಸು ಹೇಳಿದ ಮಾತು ನೆರವೇರಿತು (ಲೂಕ 21:6).[12]

ದೇವಾಲಯದ ಬಾಗಿಲುಗಳನ್ನು ಮುಚ್ಚುವದು, ಕ್ರಿ.ಶ. 70ರಲ್ಲಿ, ಅದು ಅನ್ಯರಿಗೆ (ಸಭೆಗೆ)

ಪ್ರಮುಖವಾದ ಅಂಶವಲ್ಲ ಎಂಬ ಸಂಕೇತವಾಯಿತು. ಹಾಗೂ ಯೆಹೂದ ಕ್ರೈಸ್ತರಿಗೂ ಅದು ಅರ್ಥ ಹೀನ ಸಂಗತಿಯ ಸಂಕೇತವಾಯಿತು.[13]

**ಅಕ್ರಮವಾದ ಭಾವನೆಗಳು**

ಒಂದು ವೇಳೆ ಪೌಲನ ಕೃತ್ಯವು ಅಪರಾದವಾಗಿದ್ದರೆ, ದೇವಾಲಯದ ಕಾವಲುಗಾರರು ಅವನನ್ನು ಊರ ಹೊರಕ್ಕೆ ಎಳೆದು ಕಲ್ಲೆಸೆದುಕೊಲ್ಲಬೇಕಿತ್ತು (ಅಪೊಸ್ತಲರ ಕೃತ್ಯಗಳು 7:58; ನೋಡಿರಿ ಯಾಜಕಕಾಂಡ 24:10-14). ಅದರ ಬದಲಾಗಿ, "ಅವರು ಅವನನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದರು" (ಅಪೊಸ್ತಲರ ಕೃತ್ಯಗಳು 21:32). ದೈವೀಕ ಸಹಾಯವು ಬರುವದೊರಳಗಾಗಿ, ಪೌಲನು ಜೀವಿಸುವದಕ್ಕೆ ಕೆಲ ಕ್ಷಣಗಳು ಮಾತ್ರ ಉಳಿದಿದ್ದವು. ಹಾಸ್ಯದ ಸಂಗತಿ ಏನೇಂದರೆ ಧಾರ್ಮಿಕ ಜನರನ್ನು ಉಪಯೋಗಿಸಿದನು.[14] "ಅವರು ಅವನನ್ನು ಕೊಲ್ಲುವದಕ್ಕೆ ಪ್ರಯತ್ನಿಸುತ್ತಿರುವಾಗ ಯೆರೂಸಲೇಮಿನಲ್ಲೆಲ್ಲಾ ಗಲಿಬಿಲಿಯಾಯಿತೆಂದು ಪಟಾಲಮಿನ ಸಹಸ್ರಾದಿಪತಿಗಳಿಗೆ ವರದಿ ಬಂತು" (ವಚನ 31).

ಸಾಮಾನ್ಯವಾಗಿ ಪಾಲಿಸ್ತೇನ್ ಹಾಗೂ ನಿರ್ದಿಷ್ಟವಾಗಿ ಯೆರೂಸಲೇಮು ರೋಮಾಯರಿಗೆ ತಲೇನೋವಾಗಿ ಪರಿಣಮಿಸಿದ್ದರು. ಅವರ ಮೇಲಿನ ಆಡಳಿತವನ್ನು, ಬೆಟ್ಟದ ತುದಿಯಲ್ಲಿ ಕುಳಿತುಕೊಂಡು, ಕೆಳಗಿನ ಜ್ವಾಲಾಮುಖಿಯನ್ನು ದಿಟ್ಟಿಸುವ ಚಿತ್ರಣಕ್ಕೆ ಹೋಲಿಸ ಬಹುದು. ಹಬ್ಬದ ದಿನಗಳಲ್ಲಿ ಅತಿಯಾದ ಸಮಸ್ಯೆಗಳು ಉದ್ಭವಿಸುತ್ತಿದ್ದವು, ಅದರಲ್ಲೂ ಸಾವಿರಾರು ಯೆಹೂದ್ಯರು ಯೆರೂಸಲೇಮಿಗೆ ಸೇರಿ ಬರುವಾಗ, ಈ ವಿಧದ ಸಂಗತಿಗಳು ಉದ್ಭವಿಸುತ್ತಿದ್ದವು. ಇಂಥಾ ಸಂದರ್ಭಗಳ ಸಮಸ್ಯೆಯನ್ನು ನಿವಾರಿಸಲು, ಹೆಚ್ಚಿನ ಸೇನೆಯನ್ನು ಒದಗಿಸುತ್ತಿದ್ದರು.

ಅಂತಹ ಸೇನಾ ತುಕಡಿಗಳನ್ನು ಅಂತೋನಿಯ ಬುರುಜಿನಲ್ಲಿ ಇಡುತ್ತಿದ್ದು, ಅದು ಉತ್ತರ ಹಾಗೂ ಪಶ್ಚಿಮ ದಿಕ್ಕಿನ ನಡುವೆ ಇದ್ದ ಸ್ಥಳವಾಗಿತ್ತು. ಹೆರೋದನು, ರೋಮಾಯನ ಸ್ನೇಹಿತ ನಾದ ಅಂತೋನಿಯ ನೆನಪಿನಾರ್ಥವಾಗಿ, ಅದನ್ನು ಹೆರೋದನು ಪುನಃ ಕಟ್ಟಿಸಿದನು. ಅದು ಯೆಹೂದ್ಯರ ಹಳೆಯ ಕೋಟೆಯಾಗಿತ್ತು. ಅದು ದೇವಾಲಯದ ಮೇಲ್ಭಾಗದಲ್ಲಿದ್ದು, ಐವತ್ತು ಅಡಿ ಎತ್ತರವಾಗಿತ್ತು - ಮತ್ತು ಅದರ ಕಾವು ಗೋಪುರವು ಹೆಚ್ಚಿನ ಐವತ್ತು ಅಡಿ ಎತ್ತರದಲ್ಲಿತ್ತು. ಇದರ ಮೂಲಕವಾಗಿ ಕವಲುಗಾರರು ದೇವಾಲಯವನ್ನು ಹಾಗೂ ಪಟ್ಟಣವನ್ನು ಕಾಯಲು ಸಾಧ್ಯವಾಗಿತ್ತು.

ಕ್ಲೌದ್ಯದ ಲೂಸ್ಯನು ಅದರ ಮೇಲುಸ್ತುವಾರಿ ವಹಿಸಿದ್ದನು (23:26). ಅವನು ಸಹಸ್ರಾದಿಪತಿಯಾಗಿದ್ದನು.[15] ಆ ದಿನ ಅವನು ಭಯಂಕರವಾದ ಸಂಗತಿಯನ್ನು ಎದುರಿಸಬೇಕಾಯಿತು. "ಪೂರ್ತಿ ಯೆರೂಸಲೇಮು ಗೊಂದಲಕ್ಕೀಡಾಗಿತ್ತು!"[16] ಆ ಕೋಟೆಯು, ಮೆಟ್ಟಿಲುಗಳ ಎರಡು ಪಾವಟಿಕೆಗಳ ಮೂಲಕ, ದೇವಾಲಯದ ಹೊರ ಅಂಗಳಕ್ಕೆ ಚಾಚಿಕೊಂಡಿತ್ತು. ಅವನು ಆಜ್ಞೆಗಳನ್ನು ನೀಡುತ್ತ, ಅವನು ಮೆಟ್ಟಿಲುಗಳ ಬಳಿಗೆ ಬಂದನು. "ಅವನು ತಕ್ಷಣವೇ ಸಿಪಾಯಿಗಳನ್ನು ಶತಾಧಿಪತಿಗಳನ್ನು ತೆಗೆದುಕೊಂಡು ಅವರ ಮೇಲೆ ಓಡಿಬಂದನು" (21:32ಎ).

ಅಲ್ಲಿಗೆ ಓಡಿಬಂದ ಶತಾಧಿಪತಿಗಳನ್ನು[17] ಇತರೆ ಸಿಪಾಯಿಗಳನ್ನು ಕಂಡ ನಂತರ, ಜನರೆಲ್ಲರು ಸ್ತಬ್ಧರಾದರು: "ಅವರು ಸಹಾಸ್ರಾಧಿಪತಿಯನ್ನು ಸಿಪಾಯಿಗಳನ್ನು ನೋಡಿ ಪೌಲನನ್ನು ಹೊಡೆಯುವದನ್ನು ಬಿಟ್ಟರು" (ವಚನ 32ಬಿ). ಜನರನ್ನು ನಿಯಂತ್ರಣ ಮಾಡುವ ತರಬೇತಿಯನ್ನು ಕ್ಲೌದ್ಯನು ಹೊಂದಿದ್ದನು, ಆಗ ಅವನು ಅ ಪರಿಸ್ಥಿತಿಯನ್ನು ಸುಗಮವಾಗಿ ನಿಯಂತ್ರಿಸಿದನು. ರಕ್ತ ಸಿಕ್ತನಾಗಿದ್ದ ಒಬ್ಬನ ಮೇಲೆ ಜನರು ಕ್ರೌರ್ಯಗೊಂಡದ್ದನ್ನು ಅವನು ಕಂಡನು. ತಕ್ಷಣವೇ ಅವನು ಮುಂದಾಗಿ "ಅವನು ಅವನ ಬಳಿಗೆ ಬಂದು ಹಿಡಿದುಕೊಂಡನು" (ವಚನ 33ಎ). ಅವನನ್ನು ಸಂರಕ್ಷಿಸುವ ಸಲುವಾಗಿ ಅದನ್ನು ಮಾಡದೆ, ಜನರನ್ನು

ನಿಯಂತ್ರಿಸುವ ಕರಣದಿಂದ ಮಾಡಿದನು.[18] ಜನರ ಕ್ರೋಧಕ್ಕೆ ಈ ಮನುಷ್ಯನೇ ಕಾರಣನೆಂದು ತಿಳಿದು,[19] "ಅವನಿಗೆ ಜೋಡು ಬೇಡಿಯನ್ನು" ಸಿಪಾಯಿಗಳ ಮೂಲಕ ಹಾಕಿಸಿನು, ಇದರಿಂದ "ಯೆರೂಸಲೇಮಿನಲ್ಲಿ ಪೌಲನು ಬೇಡಿಗಳಿಂದ ಬಂಧಿಸಲ್ಪಡುವನು ಎಂಬ ಪ್ರವಾದನೆ ನೆರವೇರಿತು" (20:22, 23; 21:10, 11).[20]

ಅವನು ಈ ಸಂಗತಿಯು[21] ವರದಿ ಸಲ್ಲಿಸುವ ಅಗತ್ಯವಿದದ್ದರಿಂದ, "ಇವನಾರು?" ಎಂದು ಕೇಳಿದನು (21:33ಸಿ)[22] - ಇದು ಆ ದೊಂಬಿ ಜನರ ಅಕ್ರಮ ಭಾವನೆಯಾಗಿತ್ತು ಎಂದ ನಾವು ತಿಳಿಯುತ್ತೇವೆ: "ಆಗ ಕೆಲವರು ಹೀಗೆ ಕೆಲವರು ಹಾಗೆ ಎಂದು ಕೂಗುತ್ತಿದ್ದರು" (ವಚನ 34ಎ).[23] ಅಲ್ಲಿದ್ದ ಅನೇಕರು ಪೌಲನ ಮೇಲಿದ್ದ ಅಪವಾದವಾದರೂ ಏನು ಎಂದು ಅರಿಯದಾಗಿದ್ದು, ಆದರೆ ಇಂಥಾ ಒಂದು ದೊಂಬಿಗೆ, ದೊಡ್ಡ ಅಪರಾಧವೇ ಎಂದು ತಿಳಿದಿದ್ದರು. "ಬೆಂಕಿಯಿರುವಲ್ಲಿ ಹೊಗೆ ಇರುತ್ತದೆ" ಎಂಬ ಹೇಳಿಕೆಯನ್ನು ಅವರು ನಂಬಿರಬಹುದು.[24]

ಆದರೆ ಅಧಿಕಾರಿಗೆ ಸಹಾಯಕರವಾದ ಯಾವ ಸಂಗತಿಯೂ ದೊರೆಯಲಿಲ್ಲ. "ಗದ್ದಲದ ನಿಮಿತ್ತ ನಿಜ ಸ್ಥಿತಿಯನ್ನು ತಿಳಯಲಾರದೆ ಅವನನ್ನು ಕೋಟೆಯೊಳಗೆ ತೆಗೆದುಕೊಂಡು ಹೋಗಿರೆಂದು ಅಪ್ಪಣೆ ಕೊಟ್ಟನು" (ವಚನ 34ಬಿ). ಅಲ್ಲಿ ಅವನಿಗೆ ಸೆರೆಮನೆವಾಸವಾಗುವ ಸಾಧ್ಯತೆಯಿತ್ತು. ಈಗ ಪೌಲನು ರೋಮಾಯರ ಖೈದಿಯಾದನು; ಅಪೊಸ್ತಲರ ಕೃತ್ಯಗಳು ಅಂತ್ಯದವರೆಗೆ ಅವನು ಸೆರೆಯ ಖೈದಿಯಾಗಿಯೇ ಉಳಿದನು.

ಪೌಲನು ಕಾವಲುಗಾರರು ಮೆಟ್ಟಿಲುಗಳ ಬಳಿಗೆ ಬರಲು ಮುಂದಾದರು, ತಮ್ಮ ಅಪ ರಾಧಿಯು ತಪ್ಪಿಸಿಕೊಂಡು ಹೋಗವದನ್ನು ಆ ದೊಂಬಿ ಜನರು ನೋಡಿ, ಕ್ರೌರ್ಯ ವುಳ್ಳವರಾದರು. "ಜನರ ನೂಕಾಟದ ನಿಮಿತ್ತ ಸಿಪಾಯಿಗಳು ಅವನನ್ನು ಹೊತ್ತುಕೊಂಡು[25] ಹೋಗ ಬೇಕಾಯಿತು" (ವಚನ 35).[26] "ಯಾಕಂದರೆ ಗುಂಪಾಗಿ ಕೂಡಿದ ಜನರು ಹಿಂದಿನಿಂದ ಬಂದು ಅವನನ್ನು ಕೊಲ್ಲಿರಿ ಎಂದು ಕೂಗುತ್ತಿದ್ದರು" (ವಚನ 36ಬಿ). "ಅವನು ಜೀವಿಸದಂತೆ ಅವನನ್ನು ಎಳೆದುಕೊಂಡುಹೋಗಿರಿ" ಎಂದು ಜನರು ಇನ್ನೊಂದು ಅರ್ಥದಲ್ಲಿ ಹೇಳುತ್ತಿದ್ದರು (22:22ಬಿ). ಕೆಲವಾರು ಅಡಿಗಳ ಅಂತರದಲ್ಲೇ, ಜನರು ಯೇಸುವನ್ನು ಕೊಲ್ಲಬೇಕೆಂದು ಕೂಗಿದ್ದರು![27]

**ಒಂದು ಶಂಕಾಸ್ಪದವಾದ ಭಾವನೆ**

ಪೌಲನು ಕೋಟೆಯೊಳಗೆ ಸೇರುವದೊರಳಗಾಗಿ, ಪ್ರಥಮ ಸಾರಿಗೆ ಮಾತನಾಡಿದನು.[28] "ಅವನು ಆ ಹಸ್ರಾಧಿಪತಿಯನ್ನು - ನಿನಗೆ ಒಂದು ಮಾತು ಹೇಳುವದಕ್ಕೆ ನನಗೆ ಅಪ್ಪಣೆ ಆದೀತೆ?" ಅಂದನು (ವಚನ 37ಎ). ಗೊಂದಲದ ನಡುವೆಯೂ ಅವನು ಒಂದು ಸಮಾಧಾನವನ್ನು ಹೊಂದಿದ್ದನು[29] - ಅವನು ರಕ್ತದ ಮಡುವಿನಲ್ಲಿದ್ದನು. ಅವನು ಸೇನೆಯ ಕ್ರಮವನ್ನು ಕಂಡವನಾಗಿ, ಮಾತನಾಡುವದಕ್ಕೆ ಅಪ್ಪಣೆಯನ್ನು ಕೋರಿದನು.

ಪೌಲನ ಈ ಮಾತನ್ನು ಕೇಳಿದ ತಕ್ಷಣ - ಆ ಅಧಿಕಾರಿಯು ಆಶ್ಚರ್ಯಪಟ್ಟು "ಗ್ರೀಕ್ ಭಾಷೆ ನಿನಗೆ ಬರುತ್ತದೆಯೇ ಎಂದನು" (ವಚನ 37ಬಿ). ಪೌಲನ ಗ್ರೀಕ್ ಭಾಷೆಯ ನುಡಿಗಳು ಅಧಿಕಾರಿಗೆ, ಏಕೆ ಆಶ್ಚರ್ಯವುಂಟುಮಾಡಿತು ಎಂಬುದನ್ನು ಅರಿಯೆವು.[30] ಗ್ರೀಕ್ ಭಾಷೆಯನ್ನು ಮಾತನಾಡುವದು ಯೆಹೂದ್ಯರಿಗೆ ಸಹಜ ಸಂಗತಿಯಾಗಿತ್ತು, ಮತ್ತು ಅವು ಆ ದಿನದ ವಿಶ್ವ ಭಾಷೆಯಾಗಿತ್ತು. ಬಹುಶಃ ಪೌಲನ ಗ್ರೀಕ್ ಶಬ್ದಗಳು, ಗುಣಮಟ್ಟ ಇಲ್ಲದೆ ಇದ್ದರೂ; ಅವನು ಪಾಂಡಿತ್ಯ ಹೊಂದಿದವನಾಗಿ ಮಾತನಾಡಿದನು.

ನಂತರ ಆ ಅಧಿಕಾರಿಯು ತನ್ನದೇ ಆದ ಭಾವನೆಯನ್ನು ವ್ಯಕ್ತಪಡಿಸಿದನು: "ಕೆಲವು ದಿವಸಗಳ ಹಿಂದೆ ದಂಗೆ ಎಬ್ಬಿಸಿ ಆ ನಾಲ್ಕು ಸಾವಿರ ಮಂದಿ ಘಾತಕರನ್ನು[31] ಅಡವಿಗೆ ಕರೆದುಕೊಂಡು ಹೋದ[32] ಆ ಐಗುಪ್ತನು ನೀನೇ ಅಲ್ಲವೇ? ಎಂದು ಕೇಳಿದನು" (ವಚನ 38). ಯೆಹೂದ್ಯ ಚರಿತ್ರಕಾರನದ ಜೋಸೆಫಸನ ಪ್ರಕಾರ, ಮೂರು ವರ್ಷಗಳ ಹಿಂದೆ, ಒಬ್ಬ

ಐಗುಪ್ತದವನು, ತಾನೇ ಮೆಸ್ಸಿಯನೆಂದು ಹೇಳಿಕೊಂಡಿದ್ದನು (ಮತ್ತಾಯ 24:26; ಅಪೊಸ್ತಲರ ಕೃತ್ಯಗಳು 5:36, 37), ಅವನು ಎಣ್ಣೆ ಮರಗಳ ಗುಡಕ್ಕೆ ಒಂದು ಸೈನ್ಯವನ್ನು ನಡೆಸಿದ್ದನು. ಯೆರಿಕೋವಿನ ಗೋಡೆಗಳಂತೆ, ಯೆರೂಸಲೇಮಿನ ಗೋಡೆಗಳು ಕೆಡವಲ್ಪಡುತ್ತದೆ ಎಂದು ಹೇಳಿದ್ದನು, ನಂತರ ಅವನು ಮತ್ತು ಅವನ ಸೈನ್ಯದವರು ರೋಮಾಯರಿಂದ ಸ್ವತಂತ್ರವನ್ನು ನೀಡುವರು ಎಂದು ಹೇಳಿದ್ದನು. ಆಗ ರೋಮಾಯರ ಅಧಿಕಾರಿಯಾದ ಫೇಲಿಕ್ಸನು, ಆ ವಿರೋಧಿಗಳನ್ನು ಹಿಂದಟ್ಟಿ ಜಯಿಸಿದ್ದನು, ನಾನೂರು ಜನರನ್ನು ಕೊಂಡು, ಇನ್ನೂರು ಜನರನ್ನು ಸೆರೆ ಹಿಡಿದಿದ್ದರು, ಆದರೆ ಆ ಐಗುಪ್ತನು ತಾನೇ ತಪ್ಪಿಸಿಕೊಂಡನು. ಆ ದಿನದಿಂದ, ರೋಮಾಯರು ಅವನ ಮೇಲೆ "ವಿಶೇಷಗಮನ" ಇಟ್ಟಿದ್ದರು. ಸಹಜವಾಗಿ, ಆ ಮನುಷ್ಯನು ಪೌಲನೇ ಎಂದು ಭಾವಸಿಕೊಂಡನು.

ಅವರ ಗಮನದಲ್ಲಿದ್ದ ಮನುಷ್ಯನು, ಪೌಲನಲ್ಲವೆಂದು ಪೌಲನು ಸಾಭೀತುಪಡಿಸಿದನು: ಅದಕ್ಕೆ ಪೌಲನು - "ನಾನು ಯೆಹೂದ್ಯನು ತಾರ್ಸದವನು, ಕಿಲಕ್ಯ ಸೀಮೆಯ ಪ್ರಖ್ಯಾತವಾದ ಪಟ್ಟಣವನು ಅಂದನು" (21:39ಎ).[33] ಅವನು ಯೆಹೂದ್ಯನಾಗಿದ್ದರಿಂದ, ದೇವಾಯದೊಳಗೆ ಹೋಗುವ ಹಕ್ಕನ್ನು ಹೊಂದಿದ್ದನು. ತಾರ್ಸದವನಾಗಿದ್ದರಿಂದ - ಹಾಗೂ ಅ ಪಟ್ಟಣದ ಸಂಸ್ಕೃತಿ ಹಾಗೂ ರಾಜಕೀಯ ಸ್ಥಿತಿಗೆ ಒಳಪಟ್ಟಿದ್ದರಿಂದ - ಅವನು ದೊಂಬಿ ಎಬ್ಬಿಸುವ ಸಾಧ್ಯತೆಗಳಿರಲಿಲ್ಲ.

ನಂತರ ಪೌಲನು ಒಂದು ಮನವಿಯನ್ನು ಮಾಡಿದಾಗ, ಅಧಿಕಾರಿಯು ಅವನ ನಿಮಿತ್ತ ಆಶ್ಚರ್ಯಚಕಿತನಾಗಿರಬಹುದು: "ಈ ಜನರಿಗೆ ಕೆಲವು ಮಾತುಗಳನ್ನು ಹೇಳುವದಕ್ಕೇ ನನಗೆ ಅಪ್ಪಣೆಯಾಗಬೇಕೆಂದು ಬೇಡಿಕೊಳ್ಳುತ್ತೇನೆ ಅಂದನು" (ವಚನ 39ಬಿ). ನಮ್ಮ ಮುಂದಿನ ಪಾಠದಲ್ಲಿ, ಪೌಲನು ಮೆಟ್ಟಿಲುಗಳ ಮೇಲೆ ನಂಬಿರುವದನ್ನು ಗಮನಿಸುತ್ತೇವೆ (ವಚನ 40). ಅಲ್ಲಿಂದ ಅವನು ಜನರನ್ನುದ್ದೇಶಿಸಿ ಮಾತನಾಡಿದನು. ಆದರೆ ಈಗಾಗಲೇ ಅಲ್ಲಿ ಉಂಟಾದ ಅಪಾಯಕರವಾದ ಭಾವನೆಗಳಿಂದ, ನಮಗೆ ವ್ಯಕ್ತಿಗತವಾಗಿ ದೊರಕುವ ಪಾಠಗಳನ್ನು ಗಮನಿಸೋಣ.

## ಈ ದಿನಗಳಲ್ಲಿರುವ ಅಪಾಯಕಾರಿಯಾದ ಭಾವನೆಗಳು

ತಪ್ಪಾದ ಭಾವನೆಗಳನ್ನು ಹೊಂದಿದವರಲ್ಲಿ ಆಸ್ಯದ ಯೆಹೂದ್ಯರು, ದೊಂಬಿಯ ಜನರು, ಹಾಗೂ ರೋಮಾಯದ ಅಧಿಕಾರಿಗಳು ಮೊದಲಿಗರಲ್ಲ. "ಮರಿಯಳು ಹಾಗೂ ಯೋಸೇಫರು (ಯೇಸು) ತಮ್ಮ ಗಾಡಿಯಲ್ಲಿ ಇರುವನೆಂದು ತಿಳಿದು, ಆತನು ಅವರೊಂದಿಗಿರದೆ, ಒಂದು ದಿನದ ಪ್ರಯಾಣವನ್ನು ಮಾಡಿದರು" (ಲೂಕ 2:44ಎ). ಪಂಚಾಶತ್ತಮ ದಿನದಂದು ಅಪೊಸ್ತಲರು ಕುಡಿದು ಮತ್ತಾರಾಗಿದ್ದರೆಂದು ಕೆಲವರು ಭಾವಿಸಿದರು (ಅಪೊಸ್ತಲರ ಕೃತ್ಯಗಳು 2:15). ಭೂಕಂಪದ ನಿಮಿತ್ತ ಎಚ್ಚೆತ್ತ ಸೆರೆಯ ಯಜಮಾನನು, "ಸೆರೆಯವರೆಲ್ಲ ತಪ್ಪಿಸಿಕೊಂಡರೆಂದು, ಭಾವಿಸಿ, ತನ್ನನ್ನು ತಾನೇ ಕತ್ತಿಯಿಂದ ಇರಿದು ಕೊಳ್ಳಲು ಸಿದ್ಧನಾಗಿದ್ದನು" (ಅಪೊಸ್ತಲರ ಕೃತ್ಯಗಳು 16:27ಬಿ).[34]

ಆ ಭಾವನೆಗಳು ನಾಶಕರವಾಗಿದ್ದರೂ, ಅದಕ್ಕಿಂತ ಉತ್ತಮವಾದ ಭಾವನೆಗಳು ಸಹ ಇದ್ದವು ಎಂದು ಗಮನಿಸುತ್ತೇವೆ: ಕೆಲವರು ತಾವು ಧಾರ್ಮಿಕ ಹಿನ್ನೆಲೆಯನ್ನು ಹೊಂದಿರುವದರಿಂದ ರಕ್ಷಿಸಲ್ಪಡುವರು ಎಂದು ತಿಳಿಯುತ್ತಾರೆ (ಮತ್ತಾಯ 3:9); "ಕೆಲವರು ದೇವ ಭಕ್ತಿಯನ್ನು ಲಾಭ ಸಾದನವೆಂದೆಣಿಸುವರು" (1 ತಿಮೊಥೆ 6:5ಬಿ); ಕೆಲವರು ತಾವೇ ತಪ್ಪೆಸಗುತ್ತಿದ್ದರೂ, ಇತರರಿಗೆ ತೀರ್ಪನ್ನು ನೀಡುತ್ತಾ, ತಾವು ತೀರ್ಪಿಗೆ ಒಳಗಾಗುವದಿಲ್ಲ ಎಂದು ಭಾವಿಸುವರು (ರೋಮಾಪುರ 2:3).[35]

ಪ್ರಥಮ ಶತಮಾನದಲ್ಲಿದ್ದವರ ಸಂಗಡಲೇ ಈ ಭಾವನೆಗಳು ಸತ್ತು ಹೋಗಲಿಲ್ಲ. ಈ ದಿವಸಗಳಲ್ಲೂ ಈ ಭಾವನೆಗಳು ಜೀವಂತವಾಗಿವೆ.[36]

**ನಿಯಮಗಳಿಗೆ ಸಂಬಂಧಪಟ್ಟ ಭಾವನೆಗಳು**

ಧಾರ್ಮಿಕ ಕಟ್ಟುಪಾಡುಗಳಲ್ಲಿ, ಅನೇಕ ವಿಧವಾದ ಭಾವನೆಗಳು ಒಳಗೊಂಡಿವೆ. ಇದರ ಕುರಿತು ಕೆಲವು ವರ್ಷಗಳ ಹಿಂದೆ ಬಾಬ್ಬಿ ಡಂಕನ್‌ರವರು ಬರೆದು:

> ... "ನಂಬಿಕೆಯಿಂದ ರಕ್ಷಣೆ" ಎಂಬ ಒಂದೇ ವಾಕ್ಯಭಾಗವನ್ನು ಓದಿ, ಆ ಕುರಿತ ಇತರೆ ವಾಕ್ಯಭಾಗಗಳನ್ನು ಓದದೇ, ಆ ಒಂದೇ ವಾಕ್ಯಭಾಗದಿಂದ "ನಂಬಿಕೆಯಿಂದ ರಕ್ಷಣೆ" ಎಂಬುದನ್ನು ಓದಿ ಈ ನಿರ್ಣಯವನ್ನು ಮಾಡುತ್ತಾರೆ. ಒಬ್ಬನು "ಕ್ರಿಯೆಯಿಂದ ರಕ್ಷಣೆಯಿಲ್ಲ" ಎಂಬುದನ್ನು ಓದಿ ಒಬ್ಬನಿಗೆ ರಕ್ಷಣೆ ಅಸಾಧ್ಯ ಎಂಬ ನಿರ್ಣಯವನ್ನು ಮಾಡಬಹುದು. ಒಂದು ವೇಳೆ ಅವನು "ಕ್ರಿಸ್ತನ ರಕ್ತದಿಂದ ಪಾಪಿಗೆ ರಕ್ಷಣೆ" ಎಂಬುದನ್ನು ಓದಿ. ಈ ಕಾರಣದಿಂದ "ಸಭೆಯು ಅಗತ್ಯತೆ ಇಲ್ಲವೆಂಬ" ನಿರ್ಣಯವನ್ನು ಮಾಡಬಹುದು.
>
> [ಒಬ್ಬನು] "ಪ್ರತಿಯೊಬ್ಬನಿಗಾಗಿ ಕ್ರಿಸ್ತನು ಮರಣವನ್ನು ಅನುಭವಿಸಿದನು ಎಂಬುದನ್ನು ಓದಿ, ಈ ಎಲ್ಲರಿಗೂ ರಕ್ಷಣೆಯಾಯಿತು ಎಂದು ನಿರ್ಣಯಿಸ ಬಹುದು." ಕರ್ತನ ಹೆಸರನ್ನು ಹೇಳಿಕೊಳ್ಳುವವರಿಗೆಲ್ಲಾ, ರಕ್ಷಣೆಯಾಗುವದು ಎಂದು ಓದಿ, ರಕ್ಷಣೆಯು ನಿಶ್ಚಯ ಎಂದು ಭಾವಿಸಬಹುದು, ಇದಕ್ಕಾಗಿ ಪ್ರತಿ ಅನ್ಯನು ಪ್ರಾರ್ಥಿಸಬೇಕೆಂದು ಹೇಳಬಹುದು, ವಿಶ್ವಾಸಿಗಳಿಗೆ ನ್ಯಾಯ ನಿರ್ಣಯವು ಇಲ್ಲ ಎಂಬುದನ್ನು ಓದಿ ಯಾವೊಬ್ಬನು ಕ್ರಿಸ್ತನ ಕೃಪೆಯಿಂದ ಬಿದ್ದು ಹೋಗಲಾರನು ಎಂದು ನಿರ್ಣಯಿಸುವರು, ಇವೆಲ್ಲವುಗಳನ್ನು ನಿರ್ಣಯಿಸುವದಕ್ಕಿಂತ ಮೊದಲು ತಪ್ಪಾದ ಸಿದ್ಧಾಂತಗಳನ್ನು ಹೊರಹಾಕಬೇಕು. ಸತ್ಯವೇದ ಹೇಳುವ ಎಲ್ಲಾ ಸತ್ಯಗಳನ್ನು ಒಬ್ಬನು ಹಿರಿಯರ ಹೊರತು, ಸತ್ಯವೇದದ ಒಂದು ವಿಷಯದ ಸತ್ಯವನ್ನು ಅರಿಯಲಾರನು.[37]

**ಜನರಿಗೆ ಸಂಬಂಧಪಟ್ಟ ಭಾವನೆಗಳು**

ನಾವು ಇತರರ ಬಗ್ಗೆ ಹೊಂದಿರುವ ಭಾವನೆಗಳೇ ಅತಿ ಅಪಾಯಕಾರಿಯಾದ ಭಾವನೆಗಳಾಗಿರುತ್ತದೆ. ಒಂದು ಸಾರಿ ಒಬ್ಬನು ತನ್ನ ಕುರ್ಚಿಯಲ್ಲಿ ಕುಳಿತು ಕೊಂಡು, ತನ್ನ ತೋಟವನ್ನು ವೀಕ್ಷಿಸುತ್ತಿದ್ದನು. ಅಲ್ಲಿ ಹಾದು ಹೋಗುತ್ತಿದ್ದ ಒಬ್ಬ ದಾರಿ ಹೋಕನು ಇವನನ್ನು ನೋಡಿ, ಇವನು ಸೋಮಾರಿ ಎಂದು ನಿರ್ಣಯಿಸಿದನು, ನಂತರ ಅವನು ಆ ಕುರ್ಚಿಯ ಬಳಿಯಲ್ಲಿದ್ದ ಎರಡು ಊರುಗೋಲುಗಳನ್ನು ನೋಡಿದಾಗ - ಅವನ ಮುಖವು ಕೆಂಪು ಬಣ್ಣಕ್ಕೆ ತಿರುಗಿತು.[38]

"ಕಲ್ಪನೆಗಳು" ಎಂಬ ಬರಹದಲ್ಲಿ, ಭಾವನೆಗೂ ಮತ್ತು ಸತ್ಯಕ್ಕೂ ನಡುವೆ ಇರುವ ವ್ಯತ್ಯಾಸವನ್ನು ಕ್ರಿಸ್‌ಸ್ಮಿಥ್‌ರವರು ತಿಳಿಸಿರುವರು:

> ಎಷ್ಟೋ ಸಾರಿ ನಮಗೆ ದೊರಕಿದ ವರ್ತಮಾನವು ಸರಿಯಾದದ್ದೆಂದು ತಿಳಿದು, ನಂತರ ಅದರಲ್ಲಿನ ತಪ್ಪಿನ ಅರಿವನ್ನು ತಿಳಿಯುತ್ತೇವೆಯಲ್ಲವೇ?
>
> *ಕಲ್ಪನೆಗಳು (ಭಾವಿಸುವದು):* "ಆಕೆಯು ಎಲ್ಲರಿಗಿಂತ ಉತ್ತಮಳೆಂದು ಭಾವಿಸುವಳು." *ಸತ್ಯ:* ಅವಳು ನಾಚಿಕೆ ಸ್ವಭಾವದವಳು, ಅನೇಕ ಸ್ನೇಹಿತರನ್ನು ಬಯಸುವವಳು, ಆಕೆ ಅದನ್ನು ಏಕೆ ಹೊಂದಲಿಲ್ಲ ಎಂದು ಮರುಗುವಳು.
>
> *ಕಲ್ಪನೆಗಳು:* "ಹಿರಿಯರು ಅದರ ಕುರಿತು ಏನನ್ನೂ ಹೇಳಲಿಲ್ಲ!" *ಸತ್ಯ:* ಹಿರಿಯರು ಆ ವಿಚಾರದ ಕುರಿತು ಎರಡು ಸಭೆಗಳನ್ನು ಕೂಡಿಸಿದ್ದರು, ಆಳವಾಗಿ ಪ್ರಾರ್ಥಿಸಿದ್ದರು, ಸಾಧ್ಯವಾದ ಉತ್ತಮ ನಿರ್ಧಾರವನ್ನು ಮಾಡಿದ್ದರು. ನಂಬಿಗಸ್ತರಾಗಿದ್ದರಿಂದ, ಯಾವುದೇ ರಹಸ್ಯವನ್ನು ಬಹಿರಂಗಪಡಿಸಲಿಲ್ಲ.
>
> *ಕಲ್ಪನೆಗಳು:* "ವಿಲ್ಮಳು ತಳಮಳಗೊಂಡಿರುವಳು! ಆಕೆಯು ವಿಲ್ಬರನಿಗೆ, ಆಕೆಯು ನನಗೆ ಹೇಳಿದಳೆಂದು, ಜೊಸ್ಟಿನಳಿಗೆ ಯಾರೋ ಹೇಳಿದರು ..." *ಸತ್ಯ:* ಅದಕ್ಕೆ ವಿಲ್ಮಳು

ಅದನ್ನು ಯಾರು ಅರಿತಿರುವರು ಅಂದಳು.

ನಮಗೆ ದೊರೆತಿರುವ ವರ್ತಮಾನವನ್ನು ಎರಡು ಸಾರಿ ಪರಿಶೀಲಿಸಿ ಕೊಳ್ಳಬಹುದೇ? ಬಹುಶಃ ಇಲ್ಲದೆ ಇರಬಹುದು. ಅದರಲ್ಲಿ ಹೆಚ್ಚು ಸಮಯ ವ್ಯರ್ಥವಾಗುತ್ತದೆ. ಕಲ್ಪನೆಗಳನ್ನು ಮಾಡುವಲ್ಲಿ ಚಿಂತನೆಯನ್ನು ಮಾಡಬಹುದೇ? ಜನರ ಕುರಿತಾಗಿ ಅದು ನಿರಪೇಕ್ಷವುಳ್ಳದ್ದಾಗಿದೆ! ಅರ್ಧ ಸತ್ಯ, ಅರ್ಧ ಸುದ್ಧಿ, ಹಾಗೂ ಅವ ಹೇಳನೆಯು ಮನುಷ್ಯನ ಗೌರವಕ್ಕೆ ದಕ್ಕೆ ಉಂಟುಮಾಡುತ್ತದೆ.[39]

ಪೌಲನ ಕುರಿತಾದ ಸತ್ಯಾಂಶವನ್ನು ಆ ಅಧಿಕಾರಿಯು ತಿಳಿದಾಗ ಆಶ್ಚರ್ಯಪಟ್ಟನು ದಿನ ನಿತ್ಯದಲ್ಲಿ ಜನರಲ್ಲಿರುವ ಸತ್ಯಗಳನ್ನು ಅರಿಯುವಾಗ ನಮ್ಮಲ್ಲೂ ಈ ಸಂಗತಿಗಳು ಜರುಗುತ್ತವೆ. ಒಬ್ಬನು ಬರೆದಿರುವಂತೆ, "ಜನರು ಹೊರುವ ಶಿಲುಭೆಯನ್ನು ನಾವು ನೇರವಾಗಿ ದೃಷ್ಟಿಸಬಹುದು."[40]

ಅನೇಕ ವರ್ಷಗಳ ಹಿಂದೆ ಯೇಸು ಮುಂತಿಳಿಸಿದ ಹಾಗೆ: "ತೀರ್ಪು ಮಾಡಬೇಡಿರಿ; ಹಾಗೆ ನಿಮಗೂ ತೀರ್ಪಾಗುವದಿಲ್ಲ. ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವದು" (ಮತ್ತಾಯ 7:1, 2). ನನ್ನ ಬಗ್ಗೆ ಜನರು ಉತ್ತಮವಾದ ಭಾವವನ್ನು ಹೊಂದಿರಬೇಕೆಂದು ನೀವು ಯೋಚಿಸುವದಿಲ್ಲವೇ? ಅದು ಸತ್ಯಾಂಶವಾಗಿದ್ದರೆ, ಇತರರ ಕ್ರಿಯೆಗಳ ಕುರಿತು ನಾನು ಉತ್ತಮವಾದ ಭಾವನೆಯನ್ನು ಹೊಂದಿರ ಬೇಕು (1 ಕೊರಿಂಥ 13:7) ನೀವು ಅದನ್ನೇ ಮಾಡಿರಿ.

## ಮುಕ್ತಾಯ

ಅಪೊಸ್ತಲರ ಕೃತ್ಯಗಳು 21:27-40ರ ಚಿತ್ರಣವನ್ನು ನಾನು ನೋಡುವಾಗ, ಅಲ್ಲಿ ಎರಡು ಗುಂಪಿಗೆ ಸೇರಿದ ಜನರನ್ನು ನಾನು ಕಾಣುತ್ತೇನೆ. ಆಸ್ಯದ ಯೆಹೂದ್ಯರು, ದೊಂಬಿಯ ಜನರು, ಹಾಗೂ ರೋಮಾಯ ಅಧಿಕಾರಿಗಳು - ಗೊಂದಲಕ್ಕೊಳಗಾಗಿದ್ದರು. ಆ ಎರಡು ಗುಂಪಿನಲ್ಲಿ ಗೊಂದಲಕ್ಕೊಳಗಾದವರು ಹಾಗೂ ಪ್ರತಿಷ್ಟಿತರೂ ಇದ್ದರು. ಗೊಂದಲದ ಮಧ್ಯದಲ್ಲಿ ಪೌಲನು ಪ್ರತಿಷ್ಟಿತನವನಾಗಿದ್ದನು. ನೀವು ಯಾವ ಗುಂಪಿಗೆ ಸೇರಿದವರಾಗಿರುವಿರಿ? ನೀವು ಗೊಂದಲಕ್ಕೊಳಗಾಗಿದ್ದರೆ, ನಿಮ್ಮ ಭಾವನೆಗಳು ಸತ್ಯವಾಗಿರಲಿ ಎಂದು ನಾನು ಪ್ರಾರ್ಥಿಸುತ್ತೇನೆ - ನಿಮ್ಮ ನಿರ್ಮಾಣಿಕನಿಗೂ ಸಮರ್ಪಿಸಿಕೊಂಡವರಾಗಿರಿ. ಗೊಂದಲದ ನಡುವಿನಲ್ಲೂ, ಕರ್ತನಿಗಾಗಿ ನಿಂತುಕೊಳ್ಳುವವರ ವಿಷಯದಲ್ಲಿ ದೇವರು ಈಗಾಲೇ ಆಸಕ್ತಿವಹಿಸುವವನಾಗಿರುತ್ತಾನೆ!

---

ಟಿಪ್ಪಣಿಗಳು

[1]ಪಂಚಾಶತ್ತಮವು ಒಂದು ದಿನದ ಹಬ್ಬವಾಗಿತ್ತು. ಜನರು ಹಬ್ಬವಾದ ನಂತರವೂ ಅನೇಕ ದಿವಸಗಳ ಕಾಲ ಅಲ್ಲಿ ತಂಗಿರುತ್ತಿದ್ದರು. [2]ಅಲ್ಲಿ ಗಲಾತ್ಯದ, ಮೆಕೆದೋನ್ಯದ ಹಾಗೂ ಅಖಾಯದ ಯೆಹೂದ್ಯರು ಅಲ್ಲಿ ಸೇರಿ ಬಂದಿದ್ದರು ಇವರಿದ್ದ ಎಲ್ಲಾ ಸ್ಥಳಗಳವರು ಪೌಲನನ್ನು ಕೊಲ್ಲಬೇಕೆಂದಿದ್ದರು. ಆಸ್ಯದ ಯೆಹೂದ್ಯರು ಈ ಕಾರ್ಯವನ್ನು ಮಾಡದಿದ್ದರೆ, ಇತರೆ ಸ್ಥಳದವರು ಮಾಡುವ ಸಾಧ್ಯತೆಯಿತ್ತು. ಈ ಉದ್ದೇಶಕ್ಕಾಗಿ ಕೆಲವರು ಯೆರೂಸಲೇಮಿಗೆ ಪ್ರಯಾಣ ಮಾಡಿರಬಹುದು. [3]*ಅಪೊಸ್ತಲರ ಕೃತ್ಯಗಳು, 1ನೇ* "ಸೌಕ್ಯದ ವಿಚಾರವನ್ನು" ನೋಡಿರಿ. [4]*ಅಪೊಸ್ತಲರ ಕೃತ್ಯಗಳು, 2ನೇ* "ನಿನ್ನಲ್ಲಿರುವದನ್ನು ಬಳಸಿ, ನಿನ್ನಲಾಗುವ ಕಾರ್ಯ" ಎಂಬ ಪಾಠವನ್ನು ನೋಡಿರಿ. [5]ತ್ರೋಫಿಮನು ಅಕ್ರಮವಾಗಿ ಪರಿಶುದ್ಧ ಸ್ಥಳಕ್ಕೆ ಹೋಗಿರಬಹುದು ಎಂಬುದು ಕೆಲವರ ಅಭಿಪ್ರಾಯ. I. Howard Marshall ಹೀಗೆ ಸೂಚಿಸಿದರು, "ತ್ರೋಫಿಮನು ತನ್ನ ಸ್ವಯಿಚ್ಛೆಯಿಂದ ಈ ನಿಶೇಧಿತ ಪ್ರದೇಶದಲ್ಲಿ ಅಲೆದಾಡಿದನು ಎಂಬುದು ಕೆಲವರು ಕ್ಲೆಮಿಲಿನ ವೈಯಕ್ತಿಕ ಕೊಠಡಿಯನ್ನು ನೋಡಲು ಹೋದ ಪ್ರೇಕ್ಷಕನೆ ಹೋಗಿರ ಬಹುದು ಎಂಬುದದಾಗಿಲಾರದು" (*The Acts of the Apostles,* The Tyndale New Testament Commentaries [Grand Rapids, Mich.: Wm. B. Eerdmans Publishing Co., 1980], 348).

[6]ಎಫೆಸದ ನಾಟಕ ಶಾಲೆಯಲ್ಲಿದ್ದ ಎಫೆಸದ ಅಲೆಕ್ಸಾಂಡ್ರನು ಈ ಪಿತೂರಿಯನ್ನು ಮಾಡಿರಬಹುದು (19:33, 34) ಅದನ್ನು ಅವರು ಕಂಚುಗಾರನಾದ ದೇಮೇತ್ರಿಯನಿಂದ ಕಲಿತಿರಬಹುದು. [7]ಗ್ರೀಕ್‌ನಲ್ಲಿ "ಜನರು" ಎಂಬುದಾಗಿದೆ ಆದರೆ "ಯೆಹೂದ್ಯ" "ನಮ್ಮ ಜನರು" ಎಂದಿರಬಹುದು. [8]ಗ್ರೀಕ್ (ತ್ರೋಫಿಮನು) ಒಬ್ಬನೆ ಎಂದಿದ್ದರೂ "ಗ್ರೀಕ್" ನಲ್ಲಿ ಬಹುವಚನವಿದೆ. ವ್ರತದಲ್ಲಿದ್ದ ಆ ನಾಲ್ವರು ಸಹ ಅನ್ಯರಿರಬಹುದು? [9]ನಂತರ ಪೌಲನು ವಾದಿಸುವದಕ್ಕಿದ್ದನು (24:19). [10]ಪೌಲನ ಶುದ್ಧಿಕರಣದ ಸಮಯದಲ್ಲಿ ಅವನು ಅಲ್ಲಿ ಅಶುದ್ಧ ಮಾಡಿದನೆಂಬ ಅಪವಾದ ಮಾಡಿದ್ದರೂ, ಪೌಲನು ಅದನ್ನು ಮಾಡಿರಲಿಲ್ಲ.

[11]ಅನ್ಯರ ಅಂಗಳದಲ್ಲಿ ಮಾತ್ರ ಸಾಕಷ್ಟು ಅನ್ಯರು ಸೇರಿ ಬರಬಹುದಿತ್ತು. [12]F. F. Bruce, *The Book of Acts*, rev. ed. (Grand Rapids, Mich.: Wm. B. Eerdmans Publishing Co., 1988), 410. [13]Simon J. Kistemaker, *New Testament Commentary: Exposition of the Acts of the Apostles* (Grand Rapids, Mich.: Baker Book House, 1990), 770. [14]ಯೆಹೂದ್ಯರ ದೊಂಬಿ ಜನರಿಂದ ಪೌಲನನ್ನು ಬಿಡಿಸಲು, ದೇವರು ಎರಡನೆಯ ಸಾರಿ ರೋಮಾಯರನ್ನು ಉಪಯೋಗಿಸಿದನು (18:12-17). ನಾಗರೀಕ ಅಧಿಕಾರಿಗಳು ಮುಗ್ದರನ್ನು ಸಂರಕ್ಷಿಸಬೇಕಿತ್ತು (ರೋಮಾಪು 13:3, 4). [15]ಲೂಕನು ನೀಡಿದ ಗ್ರೀಕಿನ ಅರ್ಥ. [16]ಪೌಲನೊಂದಿಗೆ ತಲೆ ಬೋಳಿಸಿದವರಲ್ಲಿ ಒಬ್ಬನಿಂದ ಆ ವರದಿಯು ಬಂದಿತ್ತು ಆದರೆ "ಮುಗ್ದರನ್ನು ಕೊಲ್ಲುತ್ತಿದ್ದಾರೆ" ಎಂಬ ವರದಿಯಲ್ಲಿ, "ಯೆರೂಸಲೇಮು ತಳಮಳಗೊಂಡಿದೆ" ಎಂಬ ವರದಿಯಾಗಿತ್ತು, ಗೋಪುರದ ಕಾವಲುಗಾರರಿಂದ ವರದಿ ಬಂದಿರಬಹುದು. [17]ಅಧಿಕಾರಿಯು ಇಬ್ಬರು ಶತಾಧಿಪತಿಗಳನ್ನು ಕರತಂದಿದ್ದರೆ, ಅಂದಾಜು ಎರಡು ನೂರು ಸಿಪಾಯಿಗಳಿರಬಹುದು. [18]ಅಧಿಕಾರಿಯು ನಂತರ "ಅರಿಯಲಾರದ ಸತ್ಯಾಂಶವನ್ನು" ನೀಡಿದನು (23:26, 27). [19]ಇಲ್ಲಿ ಇನ್ನೊಂದು ತಪ್ಪಾದ ಭಾವನೆಯಿದೆ. [20]ಅನ್ಯರಿಗೆ ಒಪ್ಪಿಸಲ್ಪಡುವನು ಎಂಬ ಪ್ರವಾದನೆಯ ನೆರವೇರಿಕೆ (21:11).

[21]ಬರವಣಿಗೆಯಲ್ಲಿ ತಿಳಿಸುವ ಅಧಿಕಾರದ ನಿಯಮವಾಗಿತ್ತು, ರೋಮಾಯರ ನಿಯಮದ ಪ್ರಕಾರ, ಅವನ ಮೇಲಿನ ಅಪವಾದವನ್ನು ಕೇಳಿದ ಶಿಕ್ಷಿಸುವ ಸಾಧ್ಯತೆಯಿರಲಿಲ್ಲ (ನೋಡಿರಿ 25:26, 27). [22]ಅವನು ಪುನಃ ಪುನಃ ಮನವಿ ಮಾಡಿದನು ಎಂಬುದಾಗಿದೆ. [23]19:32ಕ್ಕೆ ಹೋಲಿಸಿರಿ. [24]"ದಂಗೆ" ಆರಂಭಿಸಿದವರು ಅಲ್ಲಿ ಇದ್ದರು. ಅವರು ಮಾತನಾಡಲೂ ಇಲ್ಲ. ಸಿಪಾಯಿಗಳನ್ನು ನೋಡಿ ಅವರು ತಪ್ಪಿಸಿಕೊಂಡು ಹೋಗಿರಬಹುದು. [25]ಬಹುಶಃ ಪೌಲನು ಬಲಹೀನನಾಗಿದ್ದರಿಂದ, ಸಿಪಾಯಿಗಳೊಂದಿಗೆ ನಡೆಯಲಿ ಸಾಧ್ಯವಾಗದೆ ಇರಬಹುದು, ಅಥವಾ ಸಿಪಾಯಿಗಳು ಅವನನ್ನು ಎತ್ತಿಕೊಂಡು ಹೋಗಿರಬಹುದು. [26]ಪೌಲನು ಬುಟ್ಟಿಯೊಳಗೆ ಅಡಗಿ ತಪ್ಪಿಸಿಕೊಂಡದ್ದು ಅವಮಾನಕರವೇ. [27]ಲೂಕ 23:18; ಯೋಹಾನ 19:15 ನಂಬಿದ ಸಾವಿರಾರು ಯೆಹೂದ್ಯರ ಬಗ್ಗೆ ಆಶ್ಚರ್ಯವಾಗುತ್ತದೆ (21:20; KJV) ಮತ್ತು ತಲೇ ಬೋಳಿಸಿಕೊಂಡ ನಾಲ್ವರ ಕುರಿತು ಆಶ್ಚರ್ಯವಾಗುತ್ತದೆ. ಎಲ್ಲರೂ ಕೈ ಬಿಟ್ಟರು, ಕರ್ತನು ಪೌಲನನ್ನು ಕೈಬಿಡಲಿಲ್ಲ (2 ತಿಮೊಥೆ 4:16, 17). [28]ದಾಖಲಿನಂತೆ ಸತ್ಯವಾಗಿದೆ. [29]ಸ್ತೆಫನನ್ನು ಕಲ್ಲೆಸದ ಸಂಗತಿಗೆ ಹೋಲಿಸಿರಿ. ಮರಣಕ್ಕೆ ಪೌಲನು ಸಹಕರಿಸಿದ್ದರಿಂದ ಕಲಿತನೇ? [30]ಆ ಮಾತುಗಳು "ಅಧಿಕಾರಿಗೆ" ಪ್ರಕಟನೆಯಂತಿರಲಿಲ್ಲ ನೀನು ನಿಜವಾಗಿ ಐಗುಪ್ತನೇ ಎಂದು ಮುಂದೆ ಹೇಳಿರಬಹುದು. "ಐಗುಪ್ತರು ಗ್ರೀಕ್ ಮಾತನಾಡುತ್ತಿದ್ದರು." ಪೌಲನು ಅರಮಾಯದ ಬದಲು ಗ್ರೀಕ್ ಭಾಷೆಯನ್ನು ಮಾತನಾಡಿದನು, ಆದ್ದರಿಂದ ಇವನನ್ನು ಐಗುಪ್ತದವನು ಎಂದು ಆ ಅಧಿಕಾರಿಯು ತಿಳಿದಿರಬಹುದು.

[31]ಐಗುಪ್ತನು 30,000 ಸಾವಿರ ಪುರುಷರನ್ನು ಕರಕೊಂಡು ಒಲಿವೆಟ್ ಬೆಟ್ಟದ ಮೇಲೆ ಹೋದನು ಎಂದು ಯೋಸೇಫನು ತಿಳಿಸಿರುವನು. ಅಧಿಕಾರಿ ಹಾಗೂ ಯೋಸೇಫನ ನಡುವಿನ ಮಾತಿನಲ್ಲಿ ಸಂಖ್ಯೆಗಳು ವ್ಯತ್ಯಾಸವಾಗಿರಬಹುದ. ಒಂದು ವೇಳೆ ಜೋಸೇಫಸನಿಗಿಂತಲೂ, ಅಧಿಕಾರಿಯು ಸರಿ ಲೆಕ್ಕವನ್ನು ಹೇಳಿರಬಹುದು. [32]ಅಧಿಕಾರಿಯ "ನಾಲ್ಕು ಸಾವಿರ ಕತ್ತಿ ಹಿಡಿದ ಮನುಷ್ಯರು" ಎಂಬ ಅರ್ಥ, ಲ್ಯಾಟಿನ್‌ನ "ಸಿಕಾ" "ಆದರೆ ಚಿಕ್ಕ ಕತ್ತಿ" ಅವರು ಜನರ ಗುಂಪಿನಲ್ಲಿ ಸೇರಿಕೊಂಡಿದ್ದರು, ವೈರಿಗಳಿಗೆ ಅವರು ರಹಸ್ಯವಾಗಿ ಕತ್ತಿಯಿಂದ ಚುಚ್ಚುತ್ತಿದ್ದರು, ಅವರು ಭಯಂಕರವಾದ ದೊಂಬಿ ಜನರಾಗಿದ್ದರು, ಅವರು ಯೆಹೂದ್ಯ ದೊಂಬಿಗಾರರಾಗಿದ್ದರು, ನಂತರ ಯೆರೂಸಲೇಮಿನ ನಾಶವುಂಟಾಯಿತು. [33]ಈ ಸಮಯದಲ್ಲಿ ಪೌಲನು ತಾನು ರೋಮಾ ಹಕ್ಕುದಾರನೆಂದು ಹೇಳಲಿಲ್ಲ (22:5). ಆ ಸಮಯದಲ್ಲಿ ಸ್ಥಳೀಯ ಹಾಗೂ ರೋಮಾಯದ ಹಕ್ಕು ದಾರರಾಗುವ ಸಾಧ್ಯತೆಯಿತ್ತು. [34]ಇತರೇ ಭಾವನೆಗಳ ಉದಾಹರಣೆಗೆ ಮಾರ್ಕ 6:49; ಲೂಕ 12:51; 13:2, 4; 19:11; ಯೋಹಾನ 11:31; 13:29; 20:15; ಅಪೊಸ್ತಲರ ಕೃತ್ಯಗಳು 14:19; 27:13. [35]ಮತ್ತೊಂದು ಉದಾಹರಣೆ ಮತ್ತಾಯ 6:7 ನೋಡಿರಿ. [36]ನಿರ್ದಿಷ್ಟ ಕೇಳುಗರಿಗೆ ಅನುಗುಣವಾಗಿ ಈ ಪ್ರಸಂಗವನ್ನು ಮಾಡಬಹುದು. ಉದಾಹರಣೆಗಳು ಕೇವಲ ಸಲಹೆಗಳಷ್ಟೆ. [37]Bobby Duncan, "Paul in the Temple and in Prison at Jeusalem," *Studies*

*in Acts* (Denton, Tex.: Valid Publications, 1985), 203. [38]ಆರಿಸಲ್ಪಟ್ಟ ಒಂದು ದೃಷ್ಟಾಂತ (March 1995). [39]ಈ ವ್ಯಾಸವು ಮೂಲದಲ್ಲಿ, the Duncanville church of Christ, Duncanville, Texas, early in 1995ರಲ್ಲಿ ಪ್ರಚುರಿಸಲ್ಪಟ್ಟಿತು. 17 ಎಫ್ರೀಲ್ 1995ರಲ್ಲಿ ಒಂದು ನಕಲು ನನಗೆ ಸಿಕ್ಕಿತು. [40]"ಅನಗತ್ಯ ಅಭ್ಯಾಸ."